

ಪತ್ರಿಕೆ ಅಚ್ಚಿಗೆ ಹೋಗುವ ಸಮಯ
ಶಬ್ದ ಮಿತಿ ತಲೆಯಲ್ಲಿರಲಿ
ತುಸು ಯೋಚಿಸಿ ಬರೆ.
ಹೊಸ ಕವಿತೆ ಹೊಸ ಚಿತ್ರ ಬರೆ
ಅವನ ಅರ್ಧ ನಿಮೀಲಿತ ನೇತ್ರ ತೆರೆ

ಬೆಕ್ಕಿನ ನಡಿಗೆಯ ಸುಜಾತಾ
ಬುದ್ಧನ ಹೊಟ್ಟೆ ತುಂಬಿಸುವಳೆ
ಮನದಣಿಯೆ ಕುಣಿದು
ಮತ್ತೆ ಅವನ ಹುರಿದುಂಬಿಸುವಳೆ
ಇಳಿಬಿದ್ದ ಗಲ್ಲ
ಗುಳಿಬಿದ್ದ ಕಣ್ಣು
ಎದೆತನಕ ಬೆಳೆದ ಗಡ್ಡ
ಮೂಳೆಗಂಟಿದ ತೊಗಲು
ಹಣೆಯ ಗೆರೆಗಳ ಮೇಲೆ ಯುಗ ಯುಗಾಂತರದ ದಣಿವು

ಅಸಲು ಏನನ್ನು ನೋಡುತಿವೆ
ಅರ್ಧ ನಿಮೀಲಿತ ನೇತ್ರ
ನಿನ್ನ ನಾಟಕದ ಇದು ಎಷ್ಟನೆಯ ಪಾತ್ರ
ತಡವಾಗಿ ರಂಗಮಂಚಕೆ
ಬಾರದಿರು ಬುದ್ಧ
ಎಳೆಯ ಮಕ್ಕಳು ಹಸಿದು ತೂಕಡಿಸುವ ಹೊತ್ತು

ಬಾ ಸುಜಾತಾ ಬಾ
ಉತ್ಸವ ಮೂರ್ತಿಗೆ ಮರಳಿ
ಕಲ್ಲಾಗುವ ಆಸೆಯಾಗಿದೆ

ಆ ಕಲ್ಲು ಕುಟಿಗನ ಬೇಗ ಕರೆ ತಾ

● **ಲಕ್ಷ್ಮಣ್ ವಿ.ಎ.**

ಸುಜಾತಾ ಒಂದು ಹಳ್ಳಿಯ ಮುಖಂಡನ ಮಗಳು.
ಮೂರು ವಾರಗಳ ನಿರಂತರ ಉಪವಾಸದಿಂದಾಗಿ ನಿತ್ರಾಣನಾಗಿದ್ದ ಗೌತಮ
ಅವಳು ಪ್ರೀತಿಯಿಂದ ತಂದು ಕೊಟ್ಟ ಆಹಾರ ಸ್ವೀಕರಿಸಿ ತನ್ನ ಉಪವಾಸ
ಅಂತ್ಯಗೊಳಿಸುತ್ತಾನೆಂಬ ಕತೆಯಿದೆ.